**S.C. No.** 241/2023

**ಪಿ.ಡಬ್ಲ್ಯೂ-5**

**ಸಾಕ್ಷಿಯನ್ನು ದಿನಾಂಕ 17.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ.ಎಂ ವಕೀಲರಿಂದಃ**

ಪಲ್ಲವಿ ನನ್ನ ಕೊನೆಯ ತಂಗಿ ಎಂದರೆ ನಿಜ. ನಾನು ಬಿ.ಬಿ.ಎ ವರೆಗೆ ಓದಿರುತ್ತೇನೆ. ಪಲ್ಲವಿ 10 ನೇ ತರಗತಿವರೆಗೆ ಓದಿರುತ್ತಾಳೆ. 10 ನೇ ತರಗತಿ ನಂತರ ಅವರಿಗೆ ಓದಲು ಆಸಕ್ತಿ ಇಲ್ಲದಿದ್ದರಿಂದ ಆಕೆ ಮುಂದೆ ಓದಿರಲಿಲ್ಲ. 2014 ರಲ್ಲಿ ಪಲ್ಲವಿಯ ಮದುವೆಯಾಯಿತು. ಮದುವೆ ಕಾಲಕ್ಕೆ ಆಕೆಗೆ 18 ವರ್ಷವಾಗಿತ್ತು. ಅವಳು 10 ನೇ ತರಗತಿ ನಂತರ ಮನೆಯಲ್ಲೆ ಇದುದ್ದರಿಂದ ಮತ್ತು ಆರೋಪಿತನ ತಾಯಿ ಮದುವೆಗೆ ಒತ್ತಾಯಿಸಿದ್ದರಿಂದ ನನಗಿಂತ ಮುಂಚೆ ಪಲ್ಲವಿಯ ಮದುವೆಯಾಯಿತು. ಮದುವೆ ಕಾಲಕ್ಕೆ ಆರೋಪಿ ಎನ್.ಆರ್ ಮೊಹಲ್ಲದಲ್ಲಿ ವಾಸವಾಗಿದ್ದರು. ಮದುವೆ ಮಾತುಕತೆಗೂ ಮತ್ತು ಮದುವೆಗೂ ಎಷ್ಟು ದಿನ ಅಂತರವಿತ್ತು ಎಂದರೆ ನೆನಪಿಲ್ಲ. ಆರೋಪಿ ನಜರಬಾದಿನಿಂದ ಎನ್.ಆರ್ ಮೊಹಲ್ಲಗೆ ಮನೆಯನ್ನು ಯಾವ ಕಾರಣಕ್ಕೆ ಬದಲಾಯಿಸಿದ ಎಂದು ಗೊತ್ತಿಲ್ಲ. ಮನೆ ಅಡ್ಜೆಸ್ಟ ಆಗಿಲ್ಲ ಎಂಬ ಕಾರಣಕ್ಕೆ ಆರೋಪಿ ಆಗಾಗ ಮನೆಯನ್ನು ಬದಲಾವಣೆ ಮಾಡುತ್ತಿದ್ದರು. ಎನ್.ಆರ್ ಮೊಹಲ್ಲ ಮತ್ತು ವರುಣ ಮನೆಯಲ್ಲಿದ್ದಾಗ ನಾನು ನನ್ನ ತಂಗಿಯ ಮನೆಗೆ ಹೋಗಿದ್ದೆ. ನನ್ನ ತಂಗಿ ಮುಂಚೆಯೇ ನಮ್ಮ ಮನೆಗೆ ಬಂದಿದ್ದರಿಂದ ಅವಳಿಗೆ ಸೀಮಂತ ಮಾಡಿರಲಿಲ್ಲ. ನಮ್ಮ ಮನೆಯಲ್ಲೂ ಸಹ ಸೀಮಂತ ಕಾರ್ಯಕ್ರಮ ಮಾಡಿರಲಿಲ್ಲ. ಮದುವೆಗೂ ಮುಂಚೆ ಆರೋಪಿ ಕೊರಿಯರ್ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದ. ಮದುವೆಗೂ ಮುಂಚೆ ಆರೋಪಿತನ ಮನೆಯವರ ಬಗ್ಗೆ ಗೊತ್ತಿತ್ತು. ನನ್ನ ತಂದೆ

ಕೆ.ಎಸ್.ಅರ್.ಟಿ.ಸಿ ಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನಿಜ. ನನ್ನ ಅಕ್ಕ ಜ್ಯೋತಿ ಇಂಜನಿಯರ್ ಓದಿರುತ್ತಾರೆ. ಅವರ ಗಂಡ ಫಾರ್ಮಸೆಟಿಕಲ್ ವ್ಯವಹಾರ ಮಾಡುತ್ತಾರೆ. ಅವರಿಗೆ ಒಂದು ಮೆಡಿಕಲ್ ಶಾಪ್ ಹಾಗೂ ಒಂದು ಕಛೇರಿ ಇದೆ. ಅವರು ಸ್ಥಿತಿವಂತರಾಗಿದ್ದಾರೆ ಎಂದರೆ ನಿಜ. ನನ್ನ ತಂದೆ ಸಹ ಸ್ಥಿತಿವಂತರಾಗಿದ್ದಾರೆ ಎಂದರೆ ನಿಜ. ಆರೋಪಿತನಿಗೆ ಯಾರು ಇಲ್ಲದಿದ್ದರಿಂದ ಹಾಗೂ ಆರೋಪಿತನ ತಾಯಿ ಒತ್ತಾಯ ಮಾಡಿದ್ದರಿಂದ ಆರೋಪಿ ಕೊರಿಯರ್ ಬಾಯ್ ಆಗಿದ್ದರೂ ಸಹ ಪಲ್ಲವಿಯ ಮದುವೆಯನ್ನು ಆತನೊಂದಿಗೆ ಮಾಡಿದ್ದೆವು. ಆರೋಪಿತ ಬಡವನಾಗಿದ್ದರೂ ಸಹ ಆತನ ಒಳ್ಳೆ ಗುಣ ನೋಡಿ ಮದುವೆ ಮಾಡಿದೆವು ಎಂದರೆ ನಿಜ. ಮದುವೆ ಮಾತುಕತೆಗೆ ಆರೋಪಿತನ ತಾಯಿ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವರುಣದಲ್ಲಿ ನನ್ನ ತಾಯಿಯ ಮನೆಯ ಮೇಲ್ಭಾಗದಲ್ಲಿ ನನ್ನ ಅಕ್ಕ ಭಾವ ವಾಸವಾಗಿದ್ದಾರೆ ಎಂದರೆ ನಿಜ. ಕೋರೋನ 2 ನೇ ಫೇಸ್ ಕಾಲದಿಂದ ಅವರು ಆ ಮನೆಯಲ್ಲಿ ವಾಸವಾಗಿದ್ದಾರೆ. ಅವರ ಮನೆ ಮೊದಲು ಕೆ.ಜಿ.ಕೊಪ್ಪಲು ಹಾಗೂ ಸಿದ್ದಾರ್ಥ ಲೇಔಟ್ ನಲ್ಲಿ ಇತ್ತು ಎಂದರೆ ನಿಜ. ಸಿದ್ದಾರ್ಥ ಲೇಔಟ್ ನಲ್ಲಿ ಎಷ್ಟು ವರ್ಷ ವಾಸವಿದ್ದರು ಎಂದು ನೆನಪಿಲ್ಲ. ಅವರ ಮಗು ಚಿಕ್ಕದಾಗಿದ್ದರಿಂದ ನನ್ನ ಅಕ್ಕ ಜಾಸ್ತಿ ವರುಣದಲ್ಲಿ ವಾಸವಿದ್ದರು ಎಂದರೆ ನಿಜ. ಆರೋಪಿ ಮದುವೆಗೆ ಮುಂಚೆ ವರುಣದಲ್ಲಿ ಸೈಟ್ ಖರೀದಿ ಮಾಡಿದ್ದರೋ ನಂತರ ಖರೀದಿ ಮಾಡಿದ್ದರೋ ಎಂದು ನೆನಪಿಲ್ಲ. ಆ ಮನೆ ಕಟ್ಟುವಾಗ ಆರೋಪಿ ಪಲ್ಲವಿಯ ಯಾರೊಂದಿಗೂ ಮಾತನಾಡಿದರೂ ಅನುಮಾನಪಡುತ್ತಿದ್ದ ಕಾರಣ ಮತ್ತು ಒಡವೆಗಳನ್ನು ಒಂದೊಂದಾಗಿ ಮಾರಾಟ ಮಾಡಿದ್ದರಿಂದ ಜಗಳವಾಗುತ್ತಿತ್ತು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಪಲ್ಲವಿ ಇರುವವರೆಗೆ ಆರೋಪಿಯ ವಿರುದ್ಧ ಪೋಲಿಸರಿಗೆ ದೂರು ನೀಡಿರಲಿಲ್ಲ. ಆರೋಪಿ ಯಾವಾಗ ಯಾವಾಗ ಎಷ್ಟು ಹಣ ತೆಗೆದುಕೊಂಡು ಬಾ ಎಂದು ಕೇಳಿದ್ದ ನಿಖರವಾಗಿ ಹೇಳಲಾಗುವುದಿಲ್ಲ. ಹಲವು ಬಾರಿ ಆ ರೀತಿ

ಹೇಳಿದ್ದರಿಂದ ಎಷ್ಟು ಬಾರಿ ಹೇಳಿದ್ದಾನೆ ಎಂದು ಹೇಳಲಾಗುವುದಿಲ್ಲ. ಹಣ ತೆಗೆದುಕೊಂಡು ಬಾ ಎಂದು ಹೇಳಿದ ಬಗ್ಗೆ ಸಹ ದೂರು ನೀಡಿಲ್ಲ. ಮನೆ ಕಟ್ಟುವ ಕಾಲಕ್ಕೆ ಆರೋಪಿ ಬಿಟ್ಟು ಹೋದಾಗ ಆ ಬಗ್ಗೆ ಮಿಸ್ಸಿಂಗ್ ದೂರು ನೀಡಿಲ್ಲ. ಸಾಲ ಕಟ್ಟಲಾಗದೇ ಆರೋಪಿ ಆ ಕಾಲಕ್ಕೆ ಮನೆ ಬಿಟ್ಟು ಹೋಗಿದ್ದ. ಸಾಲ ಕಟ್ಟಲಾಗದೇ ಮನೆ ಬಿಟ್ಟು ಹೋದ ಬಗ್ಗೆ ಪೋಲಿಸರಿಗೆ ಹೇಳಿಲ್ಲ ಎಂದರೆ ನಿಜ. ಆರೋಪಿ ಮನೆ ಬಿಟ್ಟು ಹೋಗುವ ಬಹಳ ದಿನಗಳ ಮೊದಲು ಆತನಿಗೂ ಚಾಸ 13 ನಾಗಭೂಷಣ ಇವರಿಗೂ ಗಲಾಟೆಯಾಗಿತ್ತು. ಪಲ್ಲವಿ ಚಾಮುಂಡಿ ಬೆಟ್ಟದ ಹತ್ತಿರದಲ್ಲಿ ಟೈಲರಿಂಗ್ ತರಭೇತಿಗೆ ಹೋಗುತ್ತಿದ್ದಳು, ಆದರೆ ಎಲ್ಲಿ ಎಂದು ನಿಖರವಾದ ವಿಳಾಸ ಗೊತ್ತಿಲ್ಲ. ಪಲ್ಲವಿ ಬಳಿ ದ್ವಿಚಕ್ರ ವಾಹನ ಇತ್ತು. ಮದುವೆಯಾದ ಬಳಿಕ ಪಲ್ಲವಿ ದ್ವಿಚಕ್ರ ವಾಹನ ತೆಗೆದುಕೊಂಡಿದ್ದಳು, ಆದರೆ ಯಾವಾಗ ಎಂದು ಗೊತ್ತಿಲ್ಲ. ಪಲ್ಲವಿಯನ್ನು ಬೈಕಿನಲ್ಲಿ ಕರೆದುಕೊಂಡ ಬಂದ ದಿನ ನಾಗಭೂಷಣ ಇವರು ಯಾವ ಕಾರಣಕ್ಕೆ ಚಾಮುಂಡಿ ಬೆಟ್ಟದ ಕಡೆಗೆ ಹೋಗಿದ್ದರು ಎಂದು ಗೊತ್ತಿಲ್ಲ. ಆ ಕಾಲಕ್ಕೆ ಪಲ್ಲವಿಯ ಬಳಿ ವಾಹನ ಇರಲಿಲ್ಲ. ಆ ದಿನ ನನ್ನ ಅಕ್ಕ ಸಿದ್ದಾರ್ಥ ಲೇಔಟ್ ಮನೆಯಲ್ಲಿದ್ದರಿಂದ ಪಲ್ಲವಿಯನ್ನು ಸಹ ಆ ಮನೆಗೆ ಕರೆದುಕೊಂಡು ಹೋದರು. ಆ ದಿನ ಸಿದ್ದಾರ್ಥ ಲೇಔಟ್ ಮನೆಯಲ್ಲಿ ನನ್ನ ಅಕ್ಕ ಜ್ಯೋತಿ ಮನೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಅವಳು ಮೈಸೂರಿನಲ್ಲೇ ಇದುದ್ದರಿಂದ ಮನೆಯಲ್ಲಿ ಇದ್ದರೆಂದು ಹೇಳುತ್ತಿದ್ದೇನೆ. ಆ ಕಾಲಕ್ಕೆ ಆರೋಪಿ ಸ್ವಿಗ್ಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಗೊತ್ತಿಲ್ಲ. ಆ ದಿನ ಆರೋಪಿ ಸಿದ್ದಾರ್ಥ ಲೇಔಟ್ ಮನೆಗೆ ಹೋಗಿ ನೋಡಿದಾಗ ನಾಗಭೂಷಣರಾಧ್ಯ ಮತ್ತು ಪಲ್ಲವಿ ಒಂದೇ ರೂಂನಲ್ಲಿ ಇದುದ್ದನ್ನು ನೋಡಿದರು ಎಂದರೆ ಗೊತ್ತಿಲ್ಲ. ಆ ಘಟನೆ ಬಳಿಕ ಆರೋಪಿ ನನ್ನ ತಂದೆ ತಾಯಿ ಬಳಿ ಹೇಳಿದಾಗ ಗಲಾಟೆಯಾಗಿತ್ತು ಎಂದರೆ ಗಲಾಟೆಯಾಗಿದ್ದು ನಿಜ, ಆದರೆ ಅಷ್ಟಕ್ಕೆ ಮುಗಿದು ಹೋಗಿತ್ತು. ಆ ಕಾಲಕ್ಕೆ ಆರೋಪಿತನಿಗೆ ವರದಕ್ಷಿಣೆ ಕೇಸ್ ಹಾಕುವುದಾಗಿ ಹೇಳಿದರು ಎಂದರೆ ಗೊತ್ತಿಲ್ಲ. ಆ ರೀತಿ ಬೆದರಿಕೆ ಹಾಕಿದ್ದರಿಂದ

ಆರೋಪಿ ಮನೆ ಬಿಟ್ಟು ಹೋಗಿದ್ದ ಎಂದರೆ ಸರಿಯಲ್ಲ. ಆ ದಿನ ಸಿದ್ದಾರ್ಥ ಲೇಔಟ್ ಮನೆ ಬಳಿ ಗಲಾಟೆಯಾಗಿದೆ ಎಂದರೆ ನಿಜ. ದಿನಾಂಕ 14.6.2023 ರಂದು ಪಲ್ಲವಿಯ ಕೊಲೆಯಾದ ವಿಷಯ ಗೊತ್ತಾದ ಬಳಿಕ ನಾನು ವರುಣ ಗ್ರಾಮಕ್ಕೆ ಹೋಗಿದ್ದೆ. ಆ ದಿನ ನಾನು ಆರೋಪಿತನ ಮನೆ ಬಳಿ ಹೋಗಿಲ್ಲ. ಶವ ಪರೀಕ್ಷೆ ಕಾಲಕ್ಕೆ ನಾನು ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿದ್ದೆ. ಯಾವ ಸಮಯಕ್ಕೆ ಹೋಗಿದ್ದೆ ಎಂದು ನೆನಪಿಲ್ಲ. ಆ ದಿನ ನಾನು ಆಸ್ಪತ್ರೆಗೆ ಹೋಗೆ ಇಲ್ಲ ಎಂದರೆ ಸರಿಯಲ್ಲ. ಆ ದಿನ ದುಃಖದಲ್ಲಿದ್ದರಿಂದ ಆಸ್ಪತ್ರೆಗೆ ಹೋಗಿದ್ದ ಸಮಯ ನೆನಪಿಲ್ಲ. ದಿನಾಂಕ 18.1.2023 ರಂದು ಆರೋಪಿ, ಪಲ್ಲವಿ ಮತ್ತು ಅವರ ಮಗನ ಮಧ್ಯೆ ಪಾಲು ವಿಭಾಗ ಪತ್ರ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಅವರಿಬ್ಬರೂ ನಮ್ಮ ಸಂಸಾರವನ್ನು ಪ್ರತ್ಯೇಕವಾಗಿ ನಡೆಸಿಕೊಂಡು ಹೋಗಲು ಇಷ್ಟಪಡುತ್ತೇವೆ ಎಂದು ಪಾಲು ವಿಭಾಗ ಪತ್ರ ಮಾಡಿಕೊಂಡರು ಎಂದರೆ ಗೊತ್ತಿಲ್ಲ. ಆ ಪತ್ರವಾದ ನಂತರ ಆರೋಪಿ ಮತ್ತು ಪಲ್ಲವಿ ಬೇರೆ ಬೇರೆ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಆರೋಪಿಯು ಗುಂಡುರಾವ್ ನಗರದ ಶಿವಣ್ಣರ ಮಗ ಸೇತುರಾಂ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದರೆ ನಿಜ. ಪಲ್ಲವಿ ಮರಣ ಹೊಂದುವಾಗ ಅವರು ಆರೋಪಿ ಜೊತೆ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಪಲ್ಲವಿಯ ಮರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಲ್ಲವಿಯ ಮಗು ಹೆಚ್ಚಾಗಿ ಅಜ್ಜಿ ತಾತನ ಬಳಿ ಇತ್ತು ಎಂದರೆ ನಿಜ. ಪಲ್ಲವಿ ಮರಣ ಹೊಂದಿದಾಗಲೂ ಸಹ ಅವರ ಮಗು ಅಜ್ಜಿ ತಾತನ ಬಳಿ ಇತ್ತು ಎಂದರೆ ಸರಿಯಲ್ಲ. ಪಲ್ಲವಿ ಮರಣದ ಬಗ್ಗೆ ನನಗೆ ಪ್ರತ್ಯಕ್ಷ ಮಾಹಿತಿ ಇಲ್ಲ ಎಂದರೆ ನಿಜ. ಮೃತ ಪಲ್ಲವಿ ನನ್ನ ತಂಗಿ ಎಂಬ ಕಾರಣಕ್ಕೆ ಆರೋಪಿಯೇ ಕೊಲೆ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಲ್ಲವಿ ಮರಣ ಹೊಂದಿದ ದಿನ ಆರೋಪಿ ಪೋನ್ ಮಾಡಿದ್ದ ಎಂದು ಹೇಳುವ ಸಿಮ್‌ನ್ನು ಆರೋಪಿಯು ಪಲ್ಲವಿಗೆ ತೆಗೆದುಕೊಟ್ಟಿದ್ದ ಎಂದರೆ ಯಾವ

ಫೋನಿನಿಂದ ಮಾಡಿದ್ದ ಎಂದು ನನಗೆ ಗೊತ್ತಿಲ್ಲದ ಕಾರಣ ಆ ಬಗ್ಗೆ ಹೇಳಲಾಗುವುದಿಲ್ಲ. ಆರೋಪಿ ಪಲ್ಲವಿಗೆ ಹೊಸ ಫೋನ್ ಮತ್ತು ಸಿಮ್ ಕೊಡಿಸಿದ್ದು ಮಾತ್ರ ಗೊತ್ತಿತ್ತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು